ವೆಂಕಟೇಶ್ವರುಲು ಮಾತುಗಳಿಂದ ರಂಗರಾವ್‌ರ ಹೃದಯ ತುಂಬಿ ಬಂದಿತ್ತು. ಮಧ್ಯಾಹ್ನದ ಊಟದ ನಂತರ ಫೈಲನ್ನು ನೋಡೋಣವೆಂದು ಪಕ್ಕಕ್ಕಿಟ್ಟು ಬೇರೆ ಫೈಲುಗಳ ವಿಲೇವಾರಿಯಲ್ಲಿ ಮಗ್ನರಾಗಿದ್ದರು. ಮಧ್ಯಾಹ್ನ ಎರಡು ಗಂಟೆ ಶಿಫ್ಟ್‌ಗೆ ಹಾಜರಾಗಿದ್ದ ಆರ್ಡರ್ಲಿ ವೆಂಕಯ್ಯ ಜೈಲ್ ಕಿಚನ್ನಿಂದ ಊಟದ ಕ್ಯಾರಿಯರ್ ಹಿಡಿದು ಬಂದು antechamberನಲ್ಲಿ ಊಟ ಬಡಿಸಿದ್ದ. ಮೊಳಕೆ ಹುರುಳಿಕಾಳು ಮಸಾಲೆ ಸಾರು, ಅನ್ನ, ನುಗ್ಗೆಕಾಯಿ ಫ್ರೈ, ಬೇಯಿಸಿದ ಮೊಟ್ಟೆ, ಮೊಸರು. ಊಟ ತುಂಬಾ ರುಚಿಯಾಗಿತ್ತು.

ಶಿಕ್ಷೆ ಮುಗಿದ ಜೈಲಿನಿಂದ ಹೊರಡುವಾಗ ಕೆಲವು ಕೈದಿಗಳು ಇನ್ನೂ ಸ್ವಲ್ಪ ಕಾಲ ತಮ್ಮನ್ನು ಜೈಲಿನಲ್ಲೇ ಇರಿಸಿಕೊಳ್ಳಲು ಮನವಿ ಮಾಡುತ್ತಾರೆಂದು ಜೈಲರ್ ಮತ್ತು ಸೂಪರಿಂಟೆಂಡೆಂಟ್ ಆಗಾಗ ಹೇಳುತ್ತಿದ್ದಾಗ ರಂಗರಾವ್ ತೃಪ್ತಿಯಿಂದ ನಗುತ್ತಿದ್ದರು. ಊಟವಾದ ಬಳಿಕ ಗೆಸ್ಟ್ ಹೌಸ್ ಮುಂದೆ ಹತ್ತು ನಿಮಿಷ ವಾಕ್ ಮಾಡಿ, ಚೇಂಬರ್‌ಗೆ ಬಂದು ವೆಂಕಟೇಶ್ವರುಲು ಇಟ್ಟು ಹೋಗಿದ್ದ ಫೈಲನ್ನು ತೆರೆದಿದ್ದರು. ಒಂದೊಂದು ಹಾಳೆಯಲ್ಲೂ ಒಬ್ಬೊಬ್ಬ ಕೈದಿಯ ಫೋಟೊ ಮತ್ತು ಸಂಕ್ಷಿಪ್ತ ವಿವರ. ಫೈಲಿನ ಒಂದೊಂದೇ ಹಾಳೆಯನ್ನು ತಿರುಗಿಸುತ್ತಾ ಫೋಟೊ ಗಮನಿಸಿ ವಿವರಗಳನ್ನು ಸಾವಧಾನವಾಗಿ ಓದುತ್ತಿದ್ದ ರಂಗರಾವ್ ಐದನೇ ಪುಟ ತಿರುವಿ ಆರನೆಯ ಪುಟಕ್ಕೆ ಕಣ್ಣು ನೆಟ್ಟಾಗ ಪುಟದ ಮೇಲ್ಭಾಗದಲ್ಲಿದ್ದ ಫೋಟೊ ರಪ್ಪನೆ ಕಣ್ಣಿಗೆ ರಾಚಿತ್ತು.

ದಟ್ಟವಾದ ಮೀಸೆ ಮತ್ತು ಗಡ್ಡ. ತೀಕ್ಷ್ಣವಾದ ಕಣ್ಣು. ಹತ್ತಿರದಿಂದ ಕಂಡ ಮುಖ. ಫೋಟೊದ ಕೆಳಗೆ ಹೆಸರು: ಪೆದ್ದಚೆರುವು ಯದುನಂದನ. ಕ್ಷಣ ರಂಗರಾವ್ ಬೆವತು ಹೋಗಿದ್ದರು. ಕೂಡಲೇ ಸಾವರಿಸಿಕೊಂಡಿದ್ದರು. ಅದೇ ವ್ಯಕ್ತಿಯೆಂಬುದು ಖಾತರಿಯಾಗಿತ್ತು ವಿವರಗಳ ಕಡೆ ಕಣ್ಣಾಡಿಸಿದರು. ಬಿಇ ಪದವೀಧರ. ಪದವಿ ಮುಗಿಸಿ ಊರಿಗೆ ಬಂದ ತಕ್ಷಣ ನಕ್ಸಲರಿಗೆ ಮಾಹಿತಿದಾರನಾಗಿ ಕೆಲಸ. ಕೆಲ ದಿನಗಳಲ್ಲೇ ಸಕ್ರಿಯ ನಕ್ಸಲನಾಗಿ ಕಾಡಿನಲ್ಲಿ ಭೂಗತ. ಪೀಪಲ್ಸ್ ವಾರ್ ಗ್ರೂಪ್‌ನ ಕಮಾಂಡರ್ ಆಗಿ ನೆಲ ಬಾಂಬ್ ಸ್ಫೋಟಿಸಿ ಮೂವರು ಪೊಲೀಸರ ಸಾವಿಗೆ ಕಾರಣ. ಈಸ್ಟ್ ಗೋದಾವರಿ ಜಿಲ್ಲೆಯ ಜಮೀನ್ದಾರ ಮದ್ದಲೋಟಿ ಭೂಮಾರೆಡ್ಡಿಯ ಮನೆಗೆ ಬಾಂಬ್ ಎಸೆದು ಭೂಮಾರೆಡ್ಡಿ ಮತ್ತು ಆತನ ಕುಟುಂಬದ ಇಬ್ಬರನ್ನು ಕೊಂದಿದ್ದು. ನಕ್ಸಲ್ ಕೂಂಬಿಂಗ್ ಸಮಯದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದು ಜೀವಾವಧಿ ಶಿಕ್ಷೆಯಾಗಿ ರಾಜಮಂಡ್ರಿ ಜೈಲನ್ನು ಸೇರಿದ್ದು. ಅಲ್ಲಿ ಹದಿನೆಂಟು ವರ್ಷಗಳು ಸವೆಸಿ ಮೂರು ವರ್ಷಗಳ ಹಿಂದೆ ಹೈದರಾಬಾದಿನ ಚೆರ್ಲಪಲ್ಲಿ ಜೈಲಿಗೆ ಬಂದಿದ್ದು. ಸುಮಾರು ಹತ್ತು ವರ್ಷಗಳಿಂದ ಅತ್ಯಂತ ಸನ್ನಡತೆಯುಳ್ಳ ಕೈದಿಯಾಗಿ ಜೈಲಿನ ಇತರೆ ಕೈದಿಗಳಿಗೆ ಪಾಠ-ಪ್ರವಚನಗಳನ್ನು ಬೋಧಿಸುತ್ತಿರುವುದು. ಜೈಲಿನಲ್ಲಿದ್ದುಕೊಂಡೇ ಎಂ.ಎ ಇತಿಹಾಸವನ್ನು ಓದಿಕೊಂಡು. 'ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯ ಶಾಂತಿ ಹೆಜ್ಜೆಗಳ ಛಾಪು' ಎಂಬ ಪ್ರಬಂಧಗಳ ಪುಸ್ತಕಕ್ಕೆ ಉಸ್ಮಾನಿಯಾ ಯೂನಿವರ್ಸಿಟಿಯಿಂದ ಪ್ರಶಸ್ತಿ!

ರಂಗರಾವ್ ಕೂಡಲೇ ಜೈಲರ್ ಕೋಮಲಪಲ್ಲಿ ರಂಗರಾಜುವಿಗೆ ಫೋನ್ ಮಾಡಿ ಕೈದಿ ಪೆದ್ದಚೆರುವು ಯದುನಂದನನನ್ನು ರಾತ್ರಿ ಎಂಟೂವರೆಗೆ ತನ್ನ ಮುಂದೆ ಹಾಜರುಪಡಿಸಲು ಹೇಳಿದ್ದರು. ಆ ಕಡೆಯಿಂದ 'ಎಸ್ ಸರ್' ಎನ್ನುವ ಧ್ವನಿ ಪ್ರತಿಧ್ವನಿಸಿತ್ತು.

ರಾತ್ರಿ ಎಂಟೂವರೆಗೆ ಸರಿಯಾಗಿ ಜೈಲರ್ ರಂಗಾಜು ಯದುನಂದನನನ್ನು ರಂಗರಾವ್ ಮುಂದೆ ನಿಲ್ಲಿಸಿದ್ದರು. ಕೈಗಳಿಗೆ ತೋಳ ತೊಡಿಸಲಾಗಿತ್ತು. ತೋಳವನ್ನು ತೆಗೆಯಲು ರಂಗರಾಜುವಿಗೆ ಹೇಳಿದಾಗ 'ಕ್ಷಮಿಸಿ ಸರ್. ಶಿಷ್ಟಾಚಾರದ ಪ್ರಕಾರ ನಾವು ಹಾಗೆ ಮಾಡುವಂತಿಲ್ಲ ಸರ್' ಎಂದು ಹೇಳುತ್ತಾ ಜೈಲ್ ಸೂಪರಿಂಟೆಂಡೆಂಟ್ ವಜ್ರಂಪೇಟ ವೆಂಕಟೇಶ್ವರುಲು ಪ್ರತ್ಯಕ್ಷವಾಗಿದ್ದರು.

'ಶಿಷ್ಟಚಾರವನ್ನು ಮೀರಿದರೆ ನಿಮಗೆ ಅಗೌರವ ತೋರಿಸಿದಂತಾಗುತ್ತದೆ. ಯದುನಂದನ ಸನ್ನಡತೆಯಿಂದಾಗಿ ಬಿಡುಗಡೆಗೆ ಅರ್ಹನಾಗಿದ್ದರೂ ಈಗಲೂ ಕೈದಿಯೇ. ನೀವು ಈತನೊಂದಿಗೆ ಏನು ಮಾತನಾಡಬೇಕಾದರೂ ನಮ್ಮ ಎದುರಿನಲ್ಲಿಯೇ ಮಾತನಾಡಬೇಕು. ದಯವಿಟ್ಟು ಅನ್ಯಥಾ ಭಾವಿಸಬೇಡಿ. ನಾನು ಸೈಕಾಲಜಿ ಸ್ಟೂಡೆಂಟ್. ಮನುಷ್ಯನ ಆಲೋಚನೆಗಳು ಯಾವ ಕ್ಷಣ ಹೇಗೆ ಬದಲಾಗುತ್ತವೆಂದು ಹೇಳಲು ಬರುವುದಿಲ್ಲ. ಮಿದುಳು ಒಂದು ರೀತಿಯ ವಿಚಿತ್ರ ವೆಪನ್ ಇದ್ದ ಹಾಗೆ. ನೀವು ಈತನನ್ನು ಭೇಟಿಯಾಗಲು ಬಯಸಿರುವಿರೆಂದರೆ ಏನೋ ಹಿನ್ನೆಲೆ ಇದ್ದೇ ಇರುತ್ತದೆ. ಈತನ ಊಟ ಆಗಿದೆ. ತಾವೂ ಊಟ ಮಾಡಬೇಕಾಗಿದೆ ಸರ್'